

ಹಲವು ಶತಮಾನಗಳ ಆಚೆ ಕರೆದೊಯ್ದರು
ದೋಣಿ ಹತ್ತಿಸಿ, ಹಾಕಿ ಹುಟ್ಟು.
ಕನಸು ಮೋಡಗಳಂತೆ ಕಟ್ಟಿಕೊಂಡಿರುವ ನಭ
ಇಳೆಗಿಳಿಸಲಸಂಖ್ಯ ಕೈಗಳು
ಕಾಯಕದ ಕೈಲಾಸದಲ್ಲಿ ದಣಿವರಿಯದೆ
ಹಗಲಿರುಳು ದುಡಿಯುತಲೆ ಇರುವವು
ನಡು ನಡುವೆ ಮಾತನಾಡುವರು –ಮಾತೇ ಅದು!
ಕವಿತೆಯೇ ಆಗಿಬಿಡುತ್ತಿತ್ತು
ಅಲೆಗಳಬ್ಬರ, ಹಕ್ಕಿಹಾಡುಗಳ ಹಾಗೆ ನುಡಿ
ಮಾತು ಜ್ಯೋತಿರ್ಲಿಂಗ – ಮುತ್ತು!
ಒಮ್ಮೆಲೆ ಗದ್ದಲ. ಹೊಯ್ದಾಟ. ಹೋರಾಟ.
ಕನಲಿದರು ಕವಿ ವ್ಯಗ್ರರಾಗಿ
ದೋಣಿ ಬಂದಿತು ಮತ್ತೆ ಹೋರಾಟ ತಾವಿಗೇ ಅದೋ
ದಿಕ್ಕು ಬದಲಿಸಿ ಹೇಗೊ ಸಾಗಿ
ಹೇಳಿದರು ಕವಿಗಳು: ‘ಮತ್ತೆ ಈ ಕನಸುಗಳ
ಲೋಕವನು ಬೆಂಬತ್ತಿ ಹೋಗು.
ಎಲ್ಲರೊಂದಾಗುವುದು ಬರಿಯ ಕನಸೇನಲ್ಲ.
ಒಲ್ಲೆನೆನ್ನದೆ ಮುಂದೆ ಸಾಗು.’

● **ಚಿಂತಾಮಣಿ ಕೊಡ್ಲೆಕೆರೆ**

